# ಫುಸ್ಕೋಸ್ ಶಾಲೆ

ಇಂದಿರಾನಗರ ಬೆಂಗಳೂರು

ಅರ್ಧವಾರ್ಷಿಕ ಪರೀಕ್ಷೆ – 2016-17

ವಿಷಯ; ಕನ್ನಡ

ತರಗತಿ:VIII ಅಂಕಗಳು:80

## ವಿಭಾಗ– ಎ

**I. ಪ್ರಬಂಧ (ಬೇಕಾದ ಒಂದಕ್ಕೆ ಮಾತ್ರ)** 15

೧. ದೂರದರ್ಶನ

೨. ಕಂಪ್ಯೂಟರನ ಉಪಯೋಗ ಮತ್ತು ದುರುಪಯೋಗ

**II. ಪತ್ರಲೇಖನ (ಬೇಕಾದ ಒಂದಕ್ಕೆ ಮಾತ್ರ)** 7

೧. ನಲ್ಲಿ ಹಾಳಾಗಿದಗದ್ದು ಅದನ್ನು ರಿಪೇರಿ ಮಾಡುವಂತೆ ಸಂಬಂಧಿಸಿದ ಅಧಿಕಾರಿಗೆ ಒಂದು ಪತ್ರವನ್ನು ಬರೆಯಿರಿ.

೨. ನಿಮ್ಮ ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವದ ಕುರಿತು ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.

**III. ಗ್ರಹಣ ಶಕ್ತಿ**

ಫ್ಲಾರೆನ್ಸ್ ನೈಟಿಂಗೇಲ್ ಒಬ್ಬ ಅಸಾಧಾರಣ ಮಹಿಳೆ. ಇವಳು ಕೇವಲ ದಾದಿಯಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಲಿಲ್ಲ. ಆಡಳಿತ ಸೂತ್ರವನ್ನು ಹಿಡಿದ ಅಧಿಕಾರಿಯೂ ಆದಳು. ತೀರ ದುಃಸ್ಥಿತಿಯಲ್ಲಿದ್ದ ಈ ಮಿಲಿಟರಿ ಆಸ್ಪತ್ರೆಗಳಲ್ಲಿ ಕೇವಲ ದಾದಿಯಾಗಿ ರೋಗಿಗಳ ಆರೈಕೆ ಮಾಡುವುದು ಸಾಂತ್ವಾನ ನೀಡುವುದು ಮಾತ್ರ ತನ್ನ ಕೆಲಸ ಎಂದು ಫ್ಲಾರೇನ್ಸ್‌ಳು ಅಂದುಕೊಳ್ಳಲಿಲ್ಲ. ಆಸ್ಪತ್ರೆಯ ಸ್ಥಿತಿಯನ್ನು ಉತ್ತಮ ಪಡಿಸುವುದು ತನ್ನ ಪರಮ ಕರ್ತವ್ಯ ಎಂದು ಭಾವಿಸಿದಳು.

ಫ್ಲಾರೆನ್ಸ್ ನೈಟಿಂಗೇಲ್ ಈ ರೀತಿ ದಿನದಲ್ಲಿ ೨೦ ಗಂಟೆಗಳು ಬಿಡುವಿಲ್ಲದೆ ಕೆಲಸ ಮಾಡಿದಳು. ರೋಗಿಗಳ ಮಧ್ಯೆ ಅವಿರತವಾಗಿ ಕೆಲಸ ಮಾಡುತ್ತಾ, ಹಾಸಿಗೆಯಿಂದ ಹಾಸಿಗೆಗೆ ಹಗಲೂ ಇರುಳೆನ್ನದೆ ಸುತ್ತಾಡುತ್ತಿದ್ದಳು, ರೋಗಿಗಳ ಅಸಾಧ್ಯವಾದ ಧೈರ್ಯದಿಂದ ಅತಿ ಎಚ್ಚರಿಕೆಯಿಂದ, ಅಸದೃಶವಾದ ಶ್ರದ್ದೆಯಿಂದ ಈ ಕೆಲಸಕ್ಕೆ ತನ್ನನ್ನು ಅರ್ಪಿಸಿಕೊಂಡಳು.

ಅಷ್ಟು ದೂಡ್ಡ ಆಸ್ಪತ್ರೆಯಲ್ಲಿ ಯಾವ ರೋಗಿ ಚಿಂತಾಜನಕ ಸ್ಥಿತಿಯಲ್ಲಿರುತ್ತಿದ್ದನೋ,ಯಾರಿಗೆ ವೈದ್ಯಕೀಯ ನೆರವು ಅತ್ಯವಶ್ಯಕವಾಗಿರುತ್ತಿತೋ ಅಲ್ಲಿ ನೈಟಿಂಗೇಲ್‌ಳ ಸಹಾಯ ಹಸ್ತವು ಇದ್ದೇ ಇರುತ್ತಿತ್ತು. ಅವಳೂ ಇದ್ದಾಳೆ ಎನ್ನುವ ಅರಿವೇ ರೋಗಿಗಳಲ್ಲಿ ಆಸೆಯ ಕಿರಣವನ್ನು ಹುಟ್ಟಿಸುತ್ತಿತ್ತು. ಬದುಕುವ ಆಸೆ ಉಂಟಾಗುತ್ತಿತ್ತು. ಜೀವನ್ನಕ್ಕೆ ಮರಳುವ ಉತ್ಸಾಹ ಪುಟಿಯುತ್ತಿತ್ತು. ಅವಳ ಒಂದು ದಿನವೂ ಎತ್ತರದ ದನಿಯಲ್ಲಿ ಮಾತನಾಡಿದುದನ್ನು ನಾನು ಕೇಳಲಿಲ್ಲ ಎಂದು ಫ್ಲಾರೆನ್ಸ್‌ಳ ಜೂತೆ ಕೆಲಸ ಮಾಡುತ್ತಿದ್ದ ದಾದಿಯರು ಹೇಳುತ್ತಿದ್ದರು.

ಮೃದುವಾಗಿ ಮಾತನಾಡಿದರೂ ಅವಳ ಮಾತನ್ನು ತೆಗೆದು ಹಾಕಲು ಸಾಧ್ಯವಿರಲಿಲ್ಲ. ಅವಳ ಮಾತನ್ನು ಪಾಲಿಸಲೇಬೇಕು ಎನ್ನುವಂತಹ ದೃಢತೆ ಅವಳ ಮಾತಿನಲ್ಲಿರುತ್ತಿತ್ತು. ಕಟ್ಟು ನಿಟ್ಟಾದ ಶಿಸ್ತಿನ ಕ್ರಮದಿಂದ, ಪ್ರತಿಯೊಂದು ಸಣ್ಣ ವಿವರಕ್ಕೂ ಗಮನ ಕೂಡುವುದರ ಮೂಲಕ, ಅವಿಶ್ರಾಂತ ದುಡಿಮೆಯಿಂದ  ಗೆದ್ದೇ ಗೆಲ್ಲುವೆನೆಂಬ ದೃಢವಿಶ್ವಾಸದಿಂದ ಆಸ್ಪತ್ರೆಗೆ ನೈಟಿಂಗೇಲಳು ಒಂದು ಹೊಸ ರೂಪ ಕೊಟ್ಟಳು ಎನ್ನುವುದಂತೂ ಸತ್ಯ.

**ಪ್ರಶ್ನೆಗಳು** **10**

೧. ಫ್ಲಾರೆನ್ಸ್ ನೈಟಿಂಗೇಲ್ ಯಾರು? ಪರಿಚಯಿಸಿ.
೨. ಫ್ಲಾರೆನ್ಸ್ ನೈಟಿಂಗೇಲ್ ಹೇಗೆ ಕೆಲಸ ನಿರ್ವಹಿಸುತ್ತಿದ್ದಳು?
೩. ಫ್ಲಾರೆನ್ಸ್ ಬಗ್ಗೆ ರೋಗಿಗಳ ಅಭಿಪ್ರಾಯ ಏನಾಗಿತ್ತು?
೪. ಫ್ಲಾರೆನ್ಸ್ ಬಗ್ಗೆ ಅವಳ ಜೊತೆ ಕೆಲಸ ಮಾಡುತ್ತಿದ್ದ ಇತರ ದಾದಿಯರ ಅಭಿಪ್ರಾಯ ಏನಾಗಿತ್ತು?
೫. ಮೇಲಿನ ಗದ್ಯಭಾಗವನ್ನು ಓದಿದಾಗ ಫ್ಲಾರೆನ್ಸ್ ನೈಟಿಂಗೇಲ್ ಬಗ್ಗೆ ನಿಮ್ಮ ಅಭಿಪ್ರಾಯವೇನು?

## IV. ವ್ಯಾಕರಣ. **8**

೧. ಗಗನ, ಆನಂದ (ಸಮನಾರ್ಥಕ ಪದ ಬರೆಯಿರಿ)
೨. ನೋವು,ಯುವಕ(ವಿರುದ್ಧಾರ್ಥಕ ಪದ ಬರೆಯಿರಿ)
೩. ಪೋಷಿಸು,ಇಚ್ಛೆ(ಸ್ವಂತ ವಾಕ್ಯದಲ್ಲಿ ಬರೆಯಿರಿ)
೪. ಕೈ ಕೆಸರಾದರೆ ಬಾಯಿ ---- (ಗಾದೆ ಮಾತನ್ನು ಪೂರ್ತಿಗೊಳಿಸಿರಿ)
೫. ಮರವು ಮಳೆಗಾಳಿಗೆ ಮುರಿದು ಬಿತ್ತು (ಬಹುವಚನಕ್ಕೆ ಬದಲಾಯಿಸಿರಿ)
೬. ವಾಹನಗಳು ಬೆಟ್ಟ ಪ್ರದೇಶಗಳಲ್ಲಿ ನಿಧಾನವಾಗಿ ಚಲಿಸುವವು.(ಭೂತಕಾಲಕ್ಕೆ ಬದಲಾಯಿಸಿರಿ)
೭. ಮುದುಕ ಕೋಲು ಹಿಡಿದು ನಡೆಯುತ್ತಾನೆ (ಲಿಂಗ ಬದಲಾಯಿಸಿರಿ)
೮. ಶಾಲೆ______ ಸಮಯ______ ಸರಿಯಾಗಿ ಹೋಗಬೇಕು(ಬಿಟ್ಟ ಸ್ಥಳಗಳಲ್ಲಿ ಸೂಕ್ತ ಪ್ರತ್ಯಯಗಳನ್ನು ತುಂಬಿರಿ)

### ವಿಭಾಗ – ಬಿ
### (ಬೇಕಾದ ನಾಲ್ಕಕ್ಕೆ ಮಾತ್ರ )
### ಸಾಹಿತ್ಯ ಸಂಗಮ

## V. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ಶಿವಭೂತಿಯ ಕಥೆ)

೧. ಪಂಚತಂತ್ರದಲ್ಲಿ ಅಡಕವಾಗಿರುವ ಸಂದೇಶಗಳು ಯಾವುವು ? 2
೨. ಬಾವಿಯಲ್ಲ ಬಿದ್ದವರು ಯಾರು ಯಾರು ? ಅವರು ಹೇಗೆ ಬಾವಿಯಲ್ಲಿ ಬಿದ್ದರು ? 2
೩. ಹುಲಿ ಮತ್ತು ಕಪಿ ಶಿವಭೂತಿಯನ್ನು ಹೇಗೆ ಸತ್ಕರಿಸಿದವು ? 3
೪. ಕಂಬಳಕನ ಊರು ಯಾವುದು ? ಅವನು ಶಿವಭೂತಿಗೆ ಮಾಡಿದ ದ್ರೋಹವೇನು ? 3

**VI. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ದೀಪಾವಳಿಯ ಮಹಿಮೆ)**

೧. ಚಿನ್ನಾರಿ ದೇಶದ ರಾಜ ಯಾರು ? ಅವನ ಬಗ್ಗೆ ಪ್ರಜೆಗಳಿಗೆ ಏಕೆ ಚಿಂತೆಯಾಯಿತು ? 2

೨. ಲಕ್ಷ್ಮಿದೇವಿಯು ಪ್ರತಾಪನ ಅಹಂಕಾರವನ್ನು ಹೇಗೆ ಮುರಿದಳು ? 2

೩. ದೀಪಾವಳಿಯ ರಾತ್ರಿ ನಡೆದ ಘಟನೆ ಏನು ? 3

೪. ಪ್ರತಾಪನು ತನ್ನ ರಾಜ್ಯವನ್ನು ಮತ್ತೆ ಹೇಗೆ ಪಡೆದನು ? 3

**VII. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ತಾಳ್ಮೆಗೆ ಒಲಿದ ಅದೃಷ್ಟ)**

೧. ಪಾರಿವಾಳಗಳು ಹೇಗಿದ್ದವು ? 2

೨. ಪಾರಿವಾಳಗಳಿಗೆ ಎಂತಹ ಕಷ್ಟ ಬಂದಿತು ? ಅದಕ್ಕೆ ಗಂಡು ಪಾರಿವಾಳ ನೀಡಿದ ಸಲಹೆ ಏನು ? 2

೩. ಪಾರಿವಾಳಗಳಿಗೆ ಆಶ್ಚರ್ಯದ ಜೊತೆಯಲ್ಲಿ ಸಂತೋಷವೂ ಉಂಟಾಗಲು ಕಾರಣವೇನು ? 3

೪. ಈ ಕಥೆಯಿಂದ ನಾವು ತಿಳಿಯುವ ಸಂದೇಶವೇನು ? ವಿವರಿಸಿ. 3

## ನಾಟ್ಯಮಯೂರಿ

**VIII. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ಅಧ್ಯಾಯ – ೧)**

೧. ಶಿವ ಹಾಗೂ ಶಿವೆಯರ ನೃತ್ಯದ ಸೊಬಗನ್ನು ಬಣ್ಣಿಸಿ. 2

೨. ಮಾರಸಿಂಗಮಯ್ಯ ಯಾರು ? ರಾಜಕುಮಾರ ವಿಷ್ಣುವರ್ಧನನು ಅವರ ವ್ಯಕ್ತಿತ್ವವನ್ನು ಏಕೆ ಪ್ರಶಂಸಿಸಿದನು ? 2

೩. 'ಕ್ಷಮಿಸಿ' ಎಂದು ನುಡಿದವರು ಯಾರು ? ಆತ ನೋಡಲು ಹೇಗಿದ್ದಾನೆ ? 3

೪. ಶಾಂತಲೆ ಹಾಗೂ ವಿಷ್ಣುವರ್ಧನ ಹೇಗೆ ಪರಸ್ಪರ ಆಕರ್ಷಿತರಾದರು ? 3

**IX ~~VIII~~. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ಅಧ್ಯಾಯ – ೨)**

೧. ಶಾಂತಲೆಯ ಮನದಲ್ಲಿ ಬೆಳಗುತ್ತಿದ್ದ ಮಹಾಮೂರ್ತಿ ಯಾರದ್ದು ? ಆ ಸಂದರ್ಭವನ್ನು ಲೇಖಕರು ಹೇಗೆ ವರ್ಣಿಸಿದ್ದಾರೆ ? 2

೨. ರಾಜ ಪರಿವಾರದವರಿಗಾಗಿ ಮೇನೆಯನ್ನು ತಂದವರು ಯಾರು ? ಅದನ್ನು ಹತ್ತಲು ಶಾಂತಲೆ ನಿರಾಕರಿಸಿದ್ದೇಕೆ ? 2

೩. ಶಾಂತಲೆ 'ದೇವಾಂಶ ಸಂಭೂತರು' ಎಂದು ಕರೆದದ್ದು ಯಾರನ್ನು ? ಅವರ ಬಗ್ಗೆ ಮಾರಸಿಂಗಮಯ್ಯನವರು ನುಡಿದುದ್ದೇನು ? 3

೪. ಕಾದಂಬರಿಯಲ್ಲಿ ದ್ವಾರಸಮುದ್ರದ ಹೊಯ್ಸಳರ ಇತಿಹಾಸವು ಹೇಗೆ ಪರಿಚಯಿಸಲ್ಪಟ್ಟಿದೆ ? 3

*****************